ಇಂದು ದಿನಾಂಕಃ 04.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಪ್ರತಿವಾದಿಯ ಪರ ಶ್ರೀ. ಎಸ್.ವಿ.ಟಿ. ವಕೀಲರಿಂದಃ

1. ನಾನು ಬ್ಯಾಡಗಿ ತಾಲೂಕಿನ ಬನ್ನಿಹಟ್ಟಿ ಗ್ರಾಮದಲ್ಲಿ ಇರುತ್ತೇನೆ. ನನ್ನ ಮದುವೆಯಾಗಿ ಸುಮಾರು 45 ವರ್ಷಗಳಾಗಿವೆ. ಮದುವೆಯಾದಾಗಿನಿಂದ ನಾನು ಗಂಡನ ಮನೆಯಲ್ಲಿ ವಾಸವಿದ್ದೇನೆ. ನಾನು ಓದಿರುವುದಿಲ್ಲ. ನನ್ನ ಮದುವೆ ನನ್ನ ತಂದೆ ತಾಯಿ ಇದ್ದಾಗ ಯಲಿವಾಳ ಗ್ರಾಮದಲ್ಲಿ ಮಾಡಿರುತ್ತಾರೆ. ನನ್ನ ಮದುವೆ ಕಾಲಕ್ಕೆ ಪ್ರತಿವಾದಿಯು 4 ನೇ ತರಗತಿ ಓದುತ್ತಿದ್ದರು. ನನ್ನ ಯಜಮಾನ ಲಾರಿ ಡ್ರೈವರ್ ಇದ್ದು, ಈಗ ತೀರಿಕೊಂಡಿರುತ್ತಾರೆ. ನನ್ನ ಯಜಮಾನರು 1 ವರ್ಷ, 2 ತಿಂಗಳ ಹಿಂದೆ ಪೋತಿ ಆಗಿರುತ್ತಾರೆ.

2. ನನಗೆ 2 ಗಂಡುಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಇರುತ್ತಾರೆ. ನನ್ನ ಒಬ್ಬ ಮಗ ಸೀಡ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಇನ್ನೊಬ್ಬ ಮಗ ಶಿವಮೊಗ್ಗ ಕೆ.ಎಸ್.ಆರ್.ಟಿ.ಸಿ.,ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹೆಣ್ಣುಮಗಳು ಮದುವೆಯಾಗಿ ಗಂಡನ ಮನೆಯಲ್ಲಿ ಇರುತ್ತಾರೆ. ಪ್ರತಿವಾದಿಯೇ ಓಡಾಡಿ ನನ್ನ ಮಗನಿಗೆ ಕೆ.ಎಸ್.ಆರ್.ಟಿ.ಸಿ., ಡ್ರೈವರ್ ನೌಕರಿ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗನು ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದು ಸ್ವಲ್ಪ ದಿನ ಕೆಲಸದಿಂದ ತೆಗೆದಿದ್ದರು ಎಂದರೆ ಸರಿ. ಆಗ ಪ್ರತಿವಾದಿಯೇ ಮೇಲಾಧಿಕಾರಿಗಳಿಗೆ ಭೇಟಿಯಾಗಿ ಖರ್ಚು ಮಾಡಿ ನೌಕರಿಗೆ ವಾಪಸ್ಸು ಕಳುಹಿಸಿರುತ್ತಾರೆ ಎಂದರೆ ಸುಳ್ಳು, ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮನೆಯವರು ರಾಜಕೀಯ ವ್ಯಕ್ತಿಗಳನ್ನು ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ.

3. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ತಂದೆಗೆ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇಲ್ಲ ಎಂದರೆ ಸರಿ. ನನ್ನ ಅಜ್ಜ ಯಾವಾಗ ಪೋತಿಯಾಗಿರುತ್ತಾರೆ ಎಂದು ನನಗೆ ನೆನಪಿಲ್ಲ, ಆದರೆ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ 1 ನೇ ಆಸ್ತಿಯನ್ನು ನನ್ನ ಅಜ್ಜ ಲಾವಣಿ ತರೀಕ ಮಾಡುತ್ತಿದ್ದರು ಎಂದರೆ ಸರಿ. ನನ್ನ ಅಜ್ಜ ಪೋತಿಯ ನಂತರ ನನ್ನ ತಂದೆ ಲಾವಣಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದು ಯಾವ ರೀತಿ ಖಾತೆ ಆಯಿತು ಎಂದರೆ ನಾನು ಚಿಕ್ಕವಳು ಇರುವುದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ .